2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 2184 ಃ 2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಹೆಚ್.ಎಸ್ ಚೇತನ್ | ಸಿ ಡಬ್ಲ್ಯು | 2 |
| ತಂದೆಯ ಹೆಸರು | ಶ್ರೀನಿವಾಸ್ ಹೆಚ್.ಎಸ್ | ಪಿ ಡಬ್ಲ್ಯು | 2 |
| ವಯಸ್ಸು | 52 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಾನ | ಬಸವನಗುಡಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 02.07.2024.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ಚಾಸಾ 1 ನನ್ನ ಹೆಂಡತಿ. ಆರೋಪಿತರ ಪರಿಚಯ ಇದೆ. ನಾವು ಕುಮಾರ ಪ್ಯಾರಡೈಸ್ ಅಪಾರ್ಟ್ ಮೆಂಟ್ ನಲ್ಲಿ ವಾಸವಾಗಿದ್ದೇವೆ. ನಮಗೆ ಸೇರಿದ ಪಟ್ಯಾಲಮ್ಮ ರಸ್ತೆಯಲ್ಲಿ ಒಂದು ಕೆಫೆ ಇತ್ತು. ಸದರಿ ಕೆಫೆಯು ಶಾಹಿನ್ ಎಂಬುವವರಿಗೆ ಸೇರಿದ್ದು ನನ್ನ ಹೆಂಡತಿ ಅದನ್ನು ಬಾಡಿಗೆಗೆ ಪಡೆದುಕೊಂಡಿರುತ್ತಾರೆ. ಚಾಸಾ 1 ರವರು ಸದರಿ ಕೆಫೆಯನ್ನು ನಡೆಸುತ್ತಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಇತರರು ಸದರಿ ಕೆಫೆಯನ್ನು ನಡೆಸುತ್ತೇವೆ ಎಂದು ಬಾಡಿಗೆಗೆ ಪಡೆದುಕೊಂಡರು. ತಿಂಗಳಿಗೆ 50,000/- ರೂ ಬಾಡಿಗೆ ಕೊಡಬೇಕು ಎಂದು ಆರೋಪಿತರೊಂದಿಗೆ ಚಾಸಾ 1 ರವರು ಮಾತುಕತೆ ಮಾಡಿರುತ್ತಾರೆ. ನಂತರ ಆರೋಪಿತರು ನಮ್ಮಿಂದ ಯಾವುದೇ ಅನುಮತಿಯನ್ನು ಪಡೆಯದೇ ಕೆಫೆಯನ್ನು ಅವರೇ ನಡೆಸುತ್ತಿದ್ದರು. ಕಫೆಯಲ್ಲಿ ಇದ್ದಂತಹ ಪ್ಯಾಂಟಿಂಗ್ಸ್ ಮತ್ತು ಸ್ಕಲ್ಪರ್ಚರ್ ಹಾಳಾಗಿ ಹೋಗಿತ್ತು. ಸುಮಾರು ಬಾರಿ ಆರೋಪಿ ಬಳಿ ನಾವು ಕೇಳುತ್ತಿದ್ದೆವು. ನನ್ನ ಹೆಂಡತಿ ಹತ್ತಿರ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಿಪಿ 2 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ದಿಃ02.05.2019 ರಂದು ಮಧ್ಯಾಹ್ನ 3.30 ಗಂಟೆಗೆ ಮಾಡಿರುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನನ್ನ ಹೆಂಡತಿ ಹಾಜರಿದ್ದರು. ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಎಂದು ಹಿರಿಯ ಸ.ಸ.ಅ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು ಅವರಿಗೆ ಅನುಮತಿ ನೀಡಲಾಯಿತು.

ದಿಃ11.10.2015 ರಂದು ನಾನು ಮತ್ತು ಚಾಸಾ 1 ರವರು ಆರೋಪಿರೊಂದಿಗೆ ಮಾತುಕತೆಗೆ ಹೋದಾಗ ನನ್ನ ಹೆಂಡತಿಗೆ ಕೆಟ್ಟ ಭಾಷೆಯಲ್ಲಿ ಬೈದಿರುತ್ತಾರೆ ಎಂದರೆ ಸರಿ. ಚಾಸಾ 3 ರವರ ಸಮಕ್ಷಮ ಚಾಸಾ 1 ಮಹಿಳೆ ಎಂದು ಗೊತ್ತಿದ್ದರೂ ಸಹ ಅವರನ್ನು ಸಾರ್ವಜನಿಕರ ಮುಂದೆ ಅವಾಚ್ಯ ಶಬ್ದಗಳಿಂದ ಅವಮಾನ ಮಾಡಿರುತ್ತಾರೆ. ಮಹಜರ್ ಮಾಡುವ ಸಮಯದಲ್ಲಿ ಚಾಸಾ 3 ರವರು ಸಹ ಹಾಜರಿದ್ದರು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ವಕೀಲರು ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)

2ನೇ ಅ ಮು ಮ ದಂ.